**ಕರ್ನಾಟಕ ಸರ್ಕಾರ**

**ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು- 560001**

ಸಂಖ್ಯೆ: ಸಿ3(7) ಬಳ್ಳಾರಿ-ವಿಜಯನಗರ ಅಭಿಮತ-01/2021-22 ದಿನಾಂಕ:15/06/2024

**: ಅಧಿಕೃತಜ್ಞಾಪನ:**

ವಿಷಯ: ಬಳ್ಳಾರಿ ಜಿಲ್ಲೆಯಿಂದ ಮಾರ್ಪಡಿಸಿ ವಿಜಯನಗರ ಜಿಲ್ಲೆ ರಚನೆಯಾಗಿರುವ ಹಿನ್ನೆಲೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರಿಗೆ ಮೂಲ ಜಿಲ್ಲೆಗೆ ಸ್ಥಳ ನಿಯುಕ್ತಿಗೊಳಿಸಲು "ಅಭಿಮತ ವರ್ಗಾವಣೆ" ನಿರ್ವಹಿಸುವ ಕುರಿತು.

ಉಲ್ಲೇಖ:1. ಈ ಕಛೇರಿ ಪತ್ರ ಸಮ ಸಂಖ್ಯೆ: ದಿನಾಂಕ:27/01/2023.

2. ಅಪರ ಆಯುಕ್ತರು, ಕಲಬುರ್ಗಿ ಇವರ ಪತ್ರ ಸಂಖ್ಯೆ: ಸಿ3(1) ಪ್ರಾಶಾಶಿ: ವರ್ಗ:ಬಡ್ತಿ:01/2022-23 ದಿನಾಂಕ:27/01/2023

3. ದಿನಾಂಕ: 14/06/24ರಂದು ಸರ್ಕಾರದಿಂದ ಏಕ ಕಡತದಲ್ಲಿ ಅನುಮೋದನೆ ನೀಡಿದಂತೆ.

*****

ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರದ ಆದೇಶದನ್ವಯ ಬಳ್ಳಾರಿ ಜಿಲ್ಲೆಯಿಂದ ಮಾರ್ಪಡಿಸಿ 06 ತಾಲ್ಲೂಕುಗಳನ್ನೊಳಗೊಂಡಂತೆ ನೂತನವಾಗಿ ವಿಜಯನಗರ ಜಿಲ್ಲೆಯನ್ನು ರಚಿಸಲಾಗಿರುತ್ತದೆ. ವಿಜಯನಗರ ಜಿಲ್ಲೆಯ ಹೊಸಪೇಟೆ, ಕೂಡ್ಲಿಗಿ, ಕೊಟ್ಟೂರು, ಹರಪನಹಳ್ಳಿ, ಹಡಗಲಿ ಹಾಗೂ ಹಗರಿಬೊಮ್ಮನಹಳ್ಳಿ ತಾಲ್ಲೂಕುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರು/ಮುಖ್ಯ ಶಿಕ್ಷಕರುಗಳು ಹಾಗೂ ಬಳ್ಳಾರಿ ಜಿಲ್ಲೆಯ ಬಳ್ಳಾರಿ, ಕುರುಗೋಡು, ಸಂಡೂರು, ಸಿರಗುಪ್ಪ ಹಾಗೂ ಕಂಪ್ಲಿ ತಾಲ್ಲೂಕುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರು/ಮುಖ್ಯ ಶಿಕ್ಷಕರುಗಳು ತಮ್ಮ ಕರ್ತವ್ಯನಿರತ ಸ್ಥಳದಿಂದ ಅಂದರೆ ಬಳ್ಳಾರಿ ಜಿಲ್ಲಾ ವ್ಯಾಪ್ತಿಯಿಂದ ಮೂಲ ವಿಜಯನಗರ ಜಿಲ್ಲೆಗೆ ಹಾಗೂ ವಿಜಯನಗರ ಜಿಲ್ಲೆಯಿಂದ ಮೂಲ ಬಳ್ಳಾರಿ ಜಿಲ್ಲೆಗೆ ಅಭಿಮತ ಮೂಲಕ ಅಭಿಮತ ವರ್ಗಾವಣೆ ಹೊಂದಲು ಅವಕಾಶ ಮಾಡಿಕೊಡುವಂತೆ ಮನವಿಗಳು ಸ್ವೀಕೃತವಾಗಿರುತ್ತದೆ, ಅದರಂತೆ ಉಲ್ಲೇಖ 1ರಂತೆ ಕ್ರಮವಹಿಸಿ ಪ್ರಸ್ತಾವನೆ ಸಲ್ಲಿಸಲು ಸೂಚಿಸಲಾಗಿತ್ತು.

ಉಲ್ಲೇಖಿತ-2ರಲ್ಲಿ ಮಾನ್ಯ ಅಪರ ಆಯುಕ್ತರ ಕಛೇರಿ. ಕಲಬುರ್ಗಿ ಇವರಿಂದ ಸಲ್ಲಿಕೆಯಾಗಿರುವ ಪ್ರಸ್ತಾವನೆಯಲ್ಲಿ ಬಳ್ಳಾರಿ ಜಿಲ್ಲೆಯ 412 ಜನ ಶಿಕ್ಷಕರು ಅಭಿಮತ ವರ್ಗಾವಣೆಗೆ ಅರ್ಹರಿರುವುದಾಗಿಯೂ ಮತ್ತು ವಿಜಯನಗರ ಜಿಲ್ಲಾ ವ್ಯಾಪ್ತಿಯಲ್ಲಿ 69ಜನ ಶಿಕ್ಷಕರು ಅಭಿಮತ ವರ್ಗಾವಣೆಗೆ ಅರ್ಹರಿರುವುದಾಗಿಯೂ ಸಂಬಂಧ ಪಟ್ಟ ಉಪನಿರ್ದೇಶಕರ ವರದಿಯನ್ವಯ ಕ್ರಮಕ್ಕಾಗಿ ಸಲ್ಲಿಸಿರುತ್ತಾರೆ. ಅದರಂತೆ ಪ್ರಸ್ತುತ 2023-24ನೇ ಸಾಲಿನ ಶಿಕ್ಷಕರ ಸಾಮಾನ್ಯ ವರ್ಗಾವಣೆ ಪೂರ್ವದಲ್ಲಿ ನಿರ್ವಹಿಸುವ ಬಗ್ಗೆ ಸರ್ಕಾರಕ್ಕೆ ಅನುಮೋದನೆ ಕೋರಿ ಪ್ರಸ್ತಾವನೆ ಸಲ್ಲಿಸಲಾಗಿರುತ್ತದೆ.

ಉಲ್ಲೇಖ-3ರಂತೆ ಪ್ರಸ್ತುತ ವರ್ಗಾವಣೆ ಪ್ರಕ್ರಿಯೆಯ ಪೂರ್ವದಲ್ಲಿ ಸದರಿ ಅಭಿಮತ ವರ್ಗಾವಣೆಯನ್ನು ಖಾಲಿ ಹುದ್ದೆಗಳ ಲಭ್ಯತೆಗೆ ಒಳಪಟ್ಟು ಒಂದು ಬಾರಿಗೆ ಮಾತ್ರ ಅವಕಾಶ ನೀಡಿ ಕೈಗೊಳ್ಳಲು ಸರ್ಕಾರದಿಂದ ಅನುಮತಿಸಿ ಆದೇಶಿಸಿದ ಹಿನ್ನೆಲೆಯಲ್ಲಿ ಸದರಿ ಅಭಿಮತ ವರ್ಗಾವಣೆಯನ್ನು ಕೆಳಕಂಡಂತೆ ಕೈಗೊಳ್ಳಲು ಅನುಮತಿಸಿ ಆದೇಶಿಸಿದೆ.

ಉಲ್ಲೇಖ-2ರಂತೆ ಸ್ವೀಕೃತ ಪ್ರಸ್ತಾವನೆಯು 2022-23ನೇ ಸಾಲಿನ ಹೆಚ್ಚುವರಿ ಮತ್ತು ಕೋರಿಕೆ ವರ್ಗಾವಣೆಯಾಗುವುದಕ್ಕಿಂತ ಮೊದಲು ಶಿಕ್ಷಕರು ನೀಡಿರುವ ಅಭಿಮತವಾಗಿದ್ದು, ತದನಂತರದಲ್ಲಿ ಹಲವಾರು ಶಿಕ್ಷಕರು ಜಿಲ್ಲೆಯಿಂದ ಜಿಲ್ಲೆಗೆ ತಾಲ್ಲೂಕಿನಿಂದ ತಾಲ್ಲೂಕಿಗೆ, ವಿಭಾಗದಿಂದ ವಿಭಾಗಕ್ಕೆ ವರ್ಗಾವಣೆಯಾಗಿರುವುದು ಕಂಡುಬಂದಿದೆ. ಅಂತಹಾ ಶಿಕ್ಷಕರನ್ನು ಅಭಿಮತ ವರ್ಗಾವಣೆಗೆ ಪರಿಗಣಿಸಲು ಅವಕಾಶವಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಪ್ರಸ್ತುತದಲ್ಲಿದ್ದಂತೆ ಬಳ್ಳಾರಿ ಜಿಲ್ಲೆಯಿಂದ-ವಿಜಯನಗರ ಜಿಲ್ಲೆಗೂ, ಮತ್ತು ವಿಜಯನಗರ ಜಿಲ್ಲೆಯಿಂದ-ಬಳ್ಳಾರಿ ಜಿಲ್ಲೆಗೆ ಅಭಿಮತವರ್ಗಾವಣೆಗೆ ಇಚ್ಚಿಸುವ ಶಿಕ್ಷಕರ/ಮುಖ್ಯ ಶಿಕ್ಷಕರು ವೃಂದವಾರು, ವಿಷಯವಾರು ಮಾಧ್ಯಮವಾರು ಶಿಕ್ಷಕರ ಸೇವಾ ವಿವರಗಳನ್ನೊಳಗೊಂಡಂತೆ ಮಾಹಿತಿಯನ್ನು ಸಂಬಂಧಿಸಿದ ತಾಲ್ಲೂಕು/ಜಿಲ್ಲೆಗಳಿಂದ ಕ್ರೋಢೀಕರಿಸಿ ಪ್ರಸ್ತಾವನೆಯನ್ನು ಸ್ವೀಕರಿಸಿ ಪರಿಶೀಲಿಸಿ ಅಂತಿಮಗೊಳಿಸಿಕೊಂಡು ಅಭಿಮತ ವರ್ಗಾವಣೆಗೆ ಕ್ರಮವಹಿಸುವುದು.

ಸದರಿ ಅಭಿಮತ ವರ್ಗಾವಣೆಯು ವಿಭಾಗದ ಒಳಗಿನ ಅಂತರ ಜಿಲ್ಲಾ ವರ್ಗಾವಣೆಯಾಗಿರುವುದರಿಂದ **'ವಿಭಾಗೀಯ ಸಹನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ, ಕಲಬುರ್ಗಿ ವಿಭಾಗ"** ಇವರನ್ನು ಅಭಿಮತ ವರ್ಗಾವಣೆಯ ನೋಡಲ್ ಅಧಿಕಾರಿಗಳನ್ನಾಗಿ ನೇಮಿಸಲಾಗಿದ್ದು ನಿರ್ದೇಶಕರು ಕಲಬುರಗಿ ವಿಭಾಗ ಇವರ ಉಸ್ತುವಾರಿಯಲ್ಲಿ ಯಾವುದೇ ಲೋಪವಾಗದಂತೆ ಎಚ್ಚರಿಕೆಯಿಂದ ನಿರ್ವಹಿಸಲು ಸುಚಿಸಿದೆ.

**ಅಭಿಮತ ವರ್ಗಾವಣೆಗೆ ಕೈಗೊಳ್ಳಬೇಕಾದ ಪೂರ್ವಸಿದ್ಧತೆಗಳು:**

- ಅಭಿಮತ ವರ್ಗಾವಣೆಯು ಸದರಿ ಜಿಲ್ಲೆಗಳಲ್ಲಿ ಕರ್ತವ್ಯ ನಿರತ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರು/ಮುಖ್ಯಶಿಕ್ಷಕರುಗಳಿಗೆ ಒಂದು ಬಾರಿಯ ಕ್ರಮವಾಗಿ (One time Measure) ಮಾತ್ರ ನೀಡುವ ಅವಕಾಶವಾಗಿದೆ.
- 2022-23 ವರ್ಗಾವಣೆಯಲ್ಲಿ ಸದರಿ 2ಜಿಲ್ಲೆಗಳಿಂದ ಹೊರಗೆ ಮತ್ತು ಹೊರಗಿನ ಜಿಲ್ಲೆಗಳಿಂದ ಸದರಿ 2 ಜಿಲ್ಲೆಗಳಿಗೆ ಕೋರಿಕೆ ವರ್ಗಾವಣೆಯಾದ ಯಾವುದೇ ಶಿಕ್ಷಕರು ಅಭಿಮತ ವರ್ಗಾವಣೆಗೆ ಅರ್ಹರಿರುವುದಿಲ್ಲ ಅಂತಹಾ ಶಿಕ್ಷಕರ ಪಟ್ಟಿಯನ್ನು ಸೇರ್ಪಡೆ ಮಾಡತಕ್ಕದ್ದಲ್ಲ.
- ಅಭಿಮತ ವರ್ಗಾವಣೆಗೊಂಡವರು 2023-24ನೇ ಸಾಲಿನ ಸಾಮಾನ್ಯ ವರ್ಗಾವಣೆಗೆ ಅರ್ಹರಿರುವುದಿಲ್ಲ.
- ಅಭಿಮತ ವರ್ಗಾವಣೆಗೆ ಪಟ್ಟಿಯನ್ನು ಸಿದ್ಧಪಡಿಸುವ ಮುನ್ನ ಶಿಕ್ಷಕರುಗಳಿಗೆ ನಿಗದಿಪಡಿಸಿದ ವೇಳಾಪಟ್ಟಿಯಂತೆ ಕಾಲಾವಕಾಶ ನೀಡಿ ಪರಿಶೀಲಿಸಿ ಮಾಹಿತಿ ಕ್ರೂಢೀಕರಿಸಿ ಅಂತಿಮಗೊಳಿಸಿ ಕೌನ್ಸಿಲಿಂಗ್ ಜೇಷ್ಠತ ಪಟ್ಟಿಯನ್ನು ವಿಭಾಗೀಯ ಸಹನಿರ್ದೇಶಕರು, ಕಲ್ಬುರ್ಗಿ ಇವರ ಹಂತದಲ್ಲಿಯೇ ಭೌತಿಕವಾಗಿ ನಿರ್ವಹಿಸಿ ಸಿದ್ಧಪಡಿಸತಕ್ಕದ್ದು. ಈ ಕುರಿತಂತೆ ರಾಜ್ಯ ಕಛೇರಿಯಿಂದ ಸಾಮಾನ್ಯ ವರ್ಗಾವಣೆ ಪ್ರಕ್ರಿಯೆ ಚಾಲ್ತಿ ಇರುವ ಹಿನ್ನೆಲೆಯಲ್ಲಿ ಯಾವುದೇ ಆನ್‌ಲೈನ್ ಸೇವೆಗಳನ್ನು ನೀಡಲಾಗುವುದಿಲ್ಲ.
- ಅಭಿಮತ ವರ್ಗಾವಣೆಗೆ 2 ಜಿಲ್ಲೆಗಳ ಅರ್ಹ ಶಿಕ್ಷಕರುಗಳಿಂದ ಲಿಖಿತ ಮನವಿಯನ್ನು ಸ್ವೀಕರಿಸಲು ಅನುವಾಗುವಂತೆ ಆಯಾ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ವ್ಯಾಪಕ ಪ್ರಚಾರವನ್ನು ಕೈಗೊಂಡು ಅರ್ಹ ಎಲ್ಲಾ ಶಿಕ್ಷಕರಿಗೆ ಮಾಹಿತಿ ಒದಗುವಂತೆ ಹಾಗೂ ಕಛೇರಿಯ ಪ್ರಕಟಣಾ ಫಲಕದಲ್ಲಿ ಮಾಹಿತಿಯನ್ನು ಪ್ರಕಟಿಸತಕ್ಕದ್ದು.
- ಕಛೇರಿಯ ಅವಧಿಯಲಿ ಅಭಿಮತ ವರ್ಗಾವಣೆಗೆ ಅರ್ಜಿ ಸಲ್ಲಿಸಲು ಅರ್ಹ ಶಿಕ್ಷಕರಿಗೆ ವೇಳಾಪಟ್ಟಿಯಂತೆ ಕಾಲಾವಕಾಶ ನಿಗಧಿಪಡಿಸತಕ್ಕದ್ದು.
- ಅಭಿಮತ ವರ್ಗಾವಣೆಕೋರಿರುವ ಶಿಕ್ಷಕರ ತಾತ್ಕಾಲಿಕ ಪಟ್ಟಿಗೆ ಆಕ್ಷೇಪಣೆಯನ್ನು ಸಲ್ಲಿಸಲು ಬಾದಿತ ಶಿಕ್ಷಕರಿಗೆ ಕಾಲಾವಕಾಶ ನೀಡುವುದು.
- ಆಕ್ಷೇಪಣೆಯನ್ನು ಸ್ವೀಕರಿಸಲು ಜಿಲ್ಲೆಯಲ್ಲಿ ದಾಖಲೆ/ವಹಿಯನ್ನು ನಿರ್ವಹಿಸುವುದು. ಆಕ್ಷೇಪಣೆಯನ್ನು ಪರಿಶೀಲಿಸಿ ಅನರ್ಹ ಶಿಕ್ಷಕರಿಗೆ ಕಾರಣ ಸಹಿತ ಸೂಕ್ತ ಹಿಂಬರಹ ನೀಡತಕ್ಕದ್ದು ಹಾಗೂ ಮಾಹಿತಿಯನ್ನು ವಹಿಯಲ್ಲಿ ಕಾರಣ ಸಹಿತ ಸ್ಪಷ್ಟವಾಗಿ ನಮೂದಿಸತಕ್ಕದ್ದು.
- ಪರಿಶೀಲನೆಯ ನಂತರ ಜಿಲ್ಲಾ ಉಪನಿರ್ದೇಶಕರುಗಳು ಅಂತಿಮವಾಗಿ "ಅಭಿಮತ ವರ್ಗಾವಣೆಗೆ" ಅರ್ಹರಿರುವ ಶಿಕ್ಷಕರ ಜಿಲ್ಲಾವಾರು/ ತಾಲ್ಲೂಕುವಾರು/ ವೃಂದವಾರು/ ವಿಷಯವಾರು/ ಮಾಧ್ಯಮವಾರು (ಸಹಶಿಕ್ಷಕರು, ದೈಹಿಕ ಶಿಕ್ಷಕರು, ವಿಶೇಷ ಶಿಕ್ಷಕರು)ವಿವರಗಳನ್ನು ಪ್ರಾಥಮಿಕ ಮತ್ತು ಪ್ರೌಢಶಿಕ್ಷಕರ ಪಟ್ಟಿಯನ್ನು ಪ್ರತ್ಯೇಕವಾಗಿ ಸಿದ್ಧಪಡಿಸಿ ಶಿಕ್ಷಕರ ಪೂರ್ಣಸೇವಾ ವಿವರಗಳೊಂದಿಗೆ ಜಂಟಿ ನಿರ್ದೇಶಕರು ಕಲಬುರ್ಗಿ ವಿಭಾಗ ಇವರಿಗೆ ನೇರವಾಗಿ ಖುದ್ದಾಗಿ ಸಲ್ಲಿಸಲು ತಿಳಿಸಿದೆ.
- ಅಂತಿಮ ಪಟ್ಟಿ ಪ್ರಕಟವಾದ ನಂತರ ಯಾವುದೇ ಶಿಕ್ಷಕರ ಹೆಸರು ಸೇರ್ಪಡೆ/ಮಾರ್ಪಾಡಿಗೆ ಅವಕಾಶವಿರುವುದಿಲ್ಲ. ಆದ್ದರಿಂದ ಸಂಬಂಧಪಟ್ಟ ವ್ಯಾಪ್ತಿಯ ಉಪನಿರ್ದೇಶಕರುಗಳು ಎಲ್ಲಾ ಅಗತ್ಯ ಪೂರ್ವಾಭಾವಿ ಸಿದ್ಧಾತಾ ಕ್ರಮಗಳನ್ನು ಕೈಗೊಳ್ಳತಕ್ಕದ್ದು.
- ಈ ಸಂಬಂಧ ವಿಭಾಗೀಯ ಸಹನಿರ್ದೇಶಕರು. ಕಲಬುರ್ಗಿ ಇವರನ್ನು ಅಭಿಮತ ವರ್ಗಾವಣೆ ನಡೆಸಲು ಸಕ್ಷಮ ಪ್ರಾಧಿಕಾರಿಗಳನ್ನಾಗಿ ನೇಮಕ ಮಾಡಲಾಗಿದ್ದು ಇವರ ಉಸ್ತುವಾರಿಯಲ್ಲಿ ಪ್ರಕ್ರಿಯೆ ಸಂಬಂಧ ಅಗತ್ಯ ಪೂರ್ವಸಿದ್ಧತಾ ಕ್ರಮಗಳನ್ನು ಕೈಗೊಂಡು ಉಪನಿರ್ದೇಶಕರು(ಆಡಳಿತ) ಬಳ್ಳಾರಿ ಜಿಲ್ಲೆ ಮತ್ತು ಉಪನಿರ್ದೇಶಕರು(ಆಡಳಿತ) ವಿಜಯನಗರ ಜಿಲ್ಲೆ ಇವರ ಸಭೆ ಕರೆದು ಚರ್ಚಿಸಿ ಸೂಕ್ತ ಮಾರ್ಗದರ್ಶನ ನೀಡುವುದು.

**ಕಲಬುರಗಿ ವಿಭಾಗದ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳ ಶಿಕ್ಷಕರು/ಮುಖ್ಯ ಶಿಕ್ಷಕರುಗಳಿಗೆ ಅಭಿಮತ ವರ್ಗಾವಣೆ ನಡೆಸುವ ವೇಳಾಪಟ್ಟಿ**

| ಕ್ರ.ಸ | ವಿವರ | ದಿನಾಂಕ | ಕ್ರಮ |
|---|---|---|---|
| 1 | ಅಭಿಮತ ವರ್ಗಾವಣೆ ಬಯಸುವ ಶಿಕ್ಷಕರಿಂದ ಅರ್ಜಿ ಆಹ್ವಾನಿಸುವುದು | 18/06/2024 ರಿಂದ 21/06/2024 | ಉಪನಿರ್ದೇಶಕರು (ಆಡಳಿತ) ಬಳ್ಳಾರಿ-ವಿಜಯನಗರ |
| 2 | ಅರ್ಜಿಗಳ ಪರಿಶೀಲನೆ | 24/06/2024 ರಿಂದ 25/06/2024 | |
| 3 | ತಾತ್ಕಾಲಿಕ ಅರ್ಹತಾ ಪಟ್ಟಿ ಪ್ರಕಟಣೆ | 26/06/2024 | |
| 4 | ಆಕ್ಷೇಪಣೆ ಸಲ್ಲಿಸಲು ಅವಕಾಶ | 27/6/2024 ರಿಂದ 29/06/2024 | ವ್ಯಾಪ್ತಿಯ ಶಿಕ್ಷಕರು |
| 5 | ಆಕ್ಷೇಪಣೆ ಪರಿಶೀಲಿಸಿದ ನಂತರ ಅಂತಿಮ ಆಧ್ಯತಾ ಅರ್ಹತಾ ಪಟ್ಟಿ ಪ್ರಕಟಣೆ. ಸದರಿ ಪಟ್ಟಿಯನ್ನು ವಿಭಾಗೀಯ ಸಹನಿರ್ದೇಶಕರಿಗೆ ಸಲ್ಲಿಸುವುದು | 01/07/2024 | ಉಪನಿರ್ದೇಶಕರು (ಆಡಳಿತ) ಬಳ್ಳಾರಿ-ವಿಜಯನಗರ |
| 6 | ಖಾಲಿ ಹುದ್ದೆಗಳ ಪ್ರಕಟಣೆ | 05/07/2024 | ವಿಭಾಗೀಯ ಸಹನಿರ್ದೇಶಕರು ಕಲಬುರ್ಗಿ ವಿಭಾಗ |
| 7 | ಒಂದು ಬಾರಿಯ ಕ್ರಮವಾಗಿ ಕೌನ್ಸಿಲಿಂಗ್ ದಿನದಂದು ಲಭ್ಯವಿರುವ ಖಾಲಿ ಹುದ್ದೆಗಳಿಗೆ ಮಾತ್ರ ಅಭಿಮತ ವರ್ಗಾವಣಾ ಕೌನ್ಸಿಲಿಂಗ್ | 06/07/2024 | |

ಈ ಕುರಿತಂತೆ ಸಂಬಂಧಪಟ್ಟ ವ್ಯಾಪ್ತಿಯ ಉಪನಿರ್ದೇಶಕರು(ಆಡಳಿತ) ಬಳ್ಳಾರಿ ಜಿಲ್ಲೆ ಮತ್ತು ವಿಜಯನಗರ ಜಿಲ್ಲೆ ಇವರುಗಳು ಯಾವುದೇ ಲೋಪವಾಗದಂತೆ ಪಾರದರ್ಶಕತೆಯಿಂದ ಕಾರ್ಯ ನಿರ್ವಹಿಸುವುದು. ಸದರಿ 2 ಜಿಲ್ಲೆಗಳ ಅಭಿಮತ ವರ್ಗಾವಣೆಗೆ ಅರ್ಹರಿರುವ ಶಿಕ್ಷಕರ/ ಮುಖ್ಯ ಶಿಕ್ಷಕರ ಪಟ್ಟಿಯನ್ನು ಅಂತಿಮಗೊಳಿಸುವ ಹೊಣೆಗಾರಿಕೆ ಆಯಾ ಉಪನಿರ್ದೇಶಕರದ್ದಾಗಿರುತ್ತದೆ. ಈ ವಿಚಾರದಲ್ಲಿ ಯಾವುದೇ ಕರ್ತವ್ಯಲೋಪ ಕಂಡು ಬಂದಲ್ಲಿ ಮುಂದಿನ ಆಗುಹೋಗುಗಳಿಗೆ ಸಂಬಂಧಿಸಿದ ಉಪನಿರ್ದೇಶಕರು(ಆಡಳಿತ) ಇವರನ್ನೇನೇರ ಹೊಣೆಗಾರರನ್ನಾಗಿ ಮಾಡಿ ನಿಯಮಾನುಸಾರ ಶಿಸ್ತು ಕ್ರಮಗಳನ್ನು ಕೈಗೊಳ್ಳಲಾಗುವುದು. ಆದ್ದರಿಂದ ಈ ಕುರಿತಂತೆ ಎಚ್ಚರಿಕೆಯಿಂದ ಕಾರ್ಯ ನಿರ್ವಹಿಸಲು ಸೂಚಿಸಿದೆ.

(ಬಿ.ಬಿ. ಕಾವೇರಿ) ಭಾ.ಆ.ಸೇ.
ಆಯುಕ್ತರು.
ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು.

**ಇವರುಗಳಿಗೆ,**

1. ವಿಭಾಗೀಯ ಸಹ ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ, ಕಲಬುರ್ಗಿ ವಿಭಾಗ ಇವರು ಪ್ರಕ್ರಿಯೆ ಸಂಬಂಧ, ಅಗತ್ಯ ಕ್ರಮಕೈಗೊಳ್ಳಲು ಹಾಗೂ ಕೈಗೊಂಡ ಕ್ರಮದ ಕುರಿತ ವರದಿಯನ್ನು ಕಾಲಕಾಲಕ್ಕೆ ಈ ಕಛೇರಿಗೆ ಸಲ್ಲಿಸಲು ಸೂಚಿಸಿದೆ.
2. ಉಪನಿರ್ದೇಶಕರು(ಆಡಳಿತ) ಶಾಲಾ ಶಿಕ್ಷಣ ಇಲಾಖೆ, ಬಳ್ಳಾರಿ ಜಿಲ್ಲೆ, ಬಳ್ಳಾರಿ.
3. ಉಪನಿರ್ದೇಶಕರು(ಆಡಳಿತ) ಶಾಲಾ ಶಿಕ್ಷಣ ಇಲಾಖೆ, ವಿಜಯನಗರ ಜಿಲ್ಲೆ, ಹೊಸಪೇಟೆ.
4. ವ್ಯಾಪ್ತಿಯ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ, ಸಂಬಂಧಿಸಿದ ಉಪನಿರ್ದೇಶಕರ ಮೂಲಕ.

**ಪ್ರತಿಯನ್ನು ಮಾಹಿತಿಗಾಗಿ:**

1. ಅಪರ ಆಯುಕ್ತರು. ಶಾಲಾ ಶಿಕ್ಷಣ ಇಲಾಖೆ, ಕಲಬುರ್ಗಿ, ಇವರಿಗೆ ಮಾಹಿತಿ ಹಾಗೂ ಕ್ರಮಕ್ಕಾಗಿ.
2. ನಿರ್ದೇಶಕರು, ಅಪರ ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಕಲಬುರ್ಗಿ, ಇವರಿಗೆ ಮಾಹಿತಿ ಹಾಗೂ ಕ್ರಮಕ್ಕಾಗಿ.